ಕಾಲೇಜು ಕುಮಾರ: ಪಪ್ಪಾ, ನನಗೆ ಬುಲೆಟ್ ಬೈಕ್ ಕೊಡಿಸು.
ತಂದೆ: ನಿನಗೆ ಬುಲೆಟ್ ಬೈಕ್ ಏಕೆ? ಪಕ್ಕದ ಮನೆಯ ಹುಡುಗಿಯನ್ನು ನೋಡು ದಿನಾ ಸಿಟಿ ಬಸ್ಸಿನಲ್ಲೇ ಕಾಲೇಜಿಗೆ ಹೋಗಿ ಬರುತ್ತಾಳೆ.
ಕಾಲೇಜು ಕುಮಾರ: ಅದನ್ನೇ ನನ್ನಿಂದ ನೋಡಲಾಗುತ್ತಿಲ್ಲ.

★★★

ಅತ್ತೆ: (ಅಳಿಯನನ್ನು ಕುರಿತು) ಅಳಿಮಯ್ಯ ಮುಂದಿನ ಜನ್ಮದಲ್ಲಿ ನೀವೇನಾಗಬಯಸುತ್ತೀರಾ?
ಅಳಿಯ: ಅತ್ತೆ, ಮುಂದಿನ ಜನ್ಮದಲ್ಲಿ ನಾನು ಹಲ್ಲಿಯಾಗ ಬಯಸುತ್ತೇನೆ.
ಅತ್ತೆ: ಏಕೆ?
ಅಳಿಯ: ಏಕೆಂದರೆ ನಿಮ್ಮ ಮಗಳು ಹಲ್ಲಿಗೆ ಮಾತ್ರ ಹೆದರುತ್ತಾಳೆ.

★★★

ಗರ್ಲ್ ಫ್ರೆಂಡ್: ಡಿಯರ್ ಎಲ್ಲಿರುವೆ?
ಬಾಯ್‌ಫ್ರೆಂಡ್: ಆಸ್ಪತ್ರೆಯಲ್ಲಿ
ಗರ್ಲ್ ಫ್ರೆಂಡ್: ಏಕೆ ಏನಾಯಿತು?
ಬಾಯ್ ಫ್ರೆಂಡ್: ಬೈಕ್ ಎಕ್ಸಿಡೆಂಟ್ ಆಗಿದೆ.
ಗರ್ಲ್ ಫ್ರೆಂಡ್: ಅಯ್ಯೋ, ಅಪಘಾತವಾಯಿತೇ ಡಿಯರ್. ಮನೆಗೆ ಯಾವಾಗ ಮರಳುವೆ?
ಬಾಯ್ ಫ್ರೆಂಡ್: ಎರಡು ದಿನಗಳ ನಂತರ.
ಗರ್ಲ್ ಫ್ರೆಂಡ್: ಸರಿ, ಮನೆಗೆ ಮರಳಿದೊಡನೆ ನನ್ನ ಮೊಬೈಲಿಗೆ ಒಂದಷ್ಟು ಕರೆನ್ಸಿ ಹಾಕಿಸು.

★★★

ಡಾಕ್ಟರ್: ಮಗುವಿಗೆ ನೀರು ಕುಡಿಸುವ ಮೊದಲು, ಅದನ್ನು ಚೆನ್ನಾಗಿ ಕುದಿಸಿ ಆರಿಸಿ ಕುಡಿಸಬೇಕು.
ನಂಜ: ಮಗುವನ್ನು ನೀರಿನಲ್ಲಿ ಕುದಿಸಿದರೆ ಅದು ಸತ್ತು ಹೋಗುವುದಿಲ್ಲವೆ?

**(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ್**

ಹೆಂಡತಿ: ಮನೆಗೆ ನೆಂಟ್ರು ಬಂದಿದ್ದಾರೆ ಶರಬತ್ ಮಾಡೋಣ ಅಂದ್ರೆ ನಿಂಬೆ ಹಣ್ಣು ಇಲ್ಲ. ಏನ್ ಮಾಡ್ಲಿ.
ಗಂಡ: ಅದಕ್ಕೆ ಯಾಕೆ ಯೋಚನೆ ಮಾಡ್ತಿಯಾ, ಹೊಸ ವಿಮ್‌ನಲ್ಲಿ 100 ನಿಂಬೆಗಳ ಶಕ್ತಿ ಇದೆ. ಅದನ್ನೇ ಹಾಕಿ ಮಾಡು.

★★★



ತಿಮ್ಮ ಐಸ್‌ಗಡ್ಡೆ ಕೈಯಲ್ಲಿ ಹಿಡ್ಕೊಂಡು ಅದನ್ನೇ ನೋಡ್ತಾ ಇದ್ದ.
ಗುಂಡ: ಅವಾಗ್ಲಿಂದ ಏನ್ ನೋಡ್ತಿದಿಯಾ?
ತಿಮ್ಮ: ಮಗಾ ಎಲ್ಲೋ ವಾಟರ್ ಲೀಕ್ ಆಗ್ತಿದೆ. ಎಲ್ಲಿ ಅಂತ ಗೊತ್ತಾಗ್ತಿಲ್ಲ.

★★★

ಹುಡುಗಿ: ನೈಸ್. ಮೊಬೈಲ್. ಎಲ್ಲಿ ತಗೊಂಡೆ?
ಹುಡುಗ: ರನ್ನಿಂಗ್ ರೇಸ್‌ನಲ್ಲಿ ವಿನ್ ಆಗಿದ್ದು.
ಹುಡುಗಿ: ಎಷ್ಟು ಜನ ಓಡ್ತಿದ್ರು...?
ಹುಡುಗ: ಮೊಬೈಲ್ ಓನರ್, ಪೊಲೀಸ್ ಮತ್ತು ನಾನು.

★★★

ಟೀಚರ್: ಯಾಕೊ ಮಾರ್ಕ್ಸ್ ಕಾರ್ಡ್‌ನಲ್ಲಿ ಮಾರ್ಕ್ಸ್ ತಿದ್ದಿದೀಯಾ?
ಗುಂಡ: ನೀವೇ ಹೇಳಿದ್ರಲ್ಲ ನಮ್ಮ ತಪ್ಪನ್ನ ನಾವೇ ತಿದ್ಕೊಬೇಕು ಅಂತ, ಅದಿಕ್ಕೆ.

**(ಸಂಗ್ರಹ) ಬಿ.ಎಸ್. ರಾಜಲಕ್ಷ್ಮಿ**

ಗುಂಡ: ಗುರುಗಳೇ ನಾನು ಸಿಕ್ಕಾಪಟ್ಟೆ ಸಾಲ ಮಾಡಿಕೊಂಡಿದ್ದೇನೆ. ಜೀವನದುದ್ದಕ್ಕೂ ಬರೀ ಸಮಸ್ಯೆಗಳನ್ನೇ ಎದುರಿಸುವಂತಾಗಿದೆ. ಇದಕ್ಕೆ ಪರಿಹಾರವೇನು?
ಗುರುಗಳು: ಇದಕ್ಕೆ ಪರಿಹಾರವೆಂದರೆ ಶಾಂತಿ ಮಾಡಿಸಬೇಕು.
ಗುಂಡ: ಈಗಾಗಲೇ ಮಾಡಿಕೊಂಡಿರುವುದು ಶಾಂತಿಯನ್ನೇ. ಈ ಸಮಸ್ಯೆಗಳಿಗೆಲ್ಲಾ ಅವಳೇ ಕಾರಣ.

★★★

ಗುಂಡ: ಡಾಕ್ಟ್ರೇ ನನ್ನ ಹೆಂಡತಿ ಮನೆಯೊಳಗೆ ತುಂಬಾ ಗಲಾಟೆ ಮಾಡ್ತಾ ಇರ್ತಾಳೆ. ನನಗೆ ನೆಮ್ಮದಿನೇ ಇಲ್ಲದಂತಾಗಿದೆ– ವಿಪರೀತ ತಲೆ ನೋವು. ಯಾವುದಾದರೂ ಮಾತ್ರೆ ಇದ್ದರೆ ಕೊಡಿ.
ವೈದ್ಯ: ಇಂಥ ಕಾರಣಕ್ಕೆ ಮಾತ್ರೆ ಇದ್ದಿದ್ರೆ ನಾನ್ಯಾಕೆ ಭಾನುವಾರವೂ ಶಾಪ್ ತೆಗೆದು ಕೂರ್ತಿದ್ದೆ?

★★★



ಗುಂಡ: ಗಣಪತಿ ಶಾಂತಿ ಪ್ರಿಯ
ಗೆಳೆಯ: ಅರೆ ನಿನಗೆ ಹೇಗೆ ಗೊತ್ತು?
ಗುಂಡ: ಅದಕ್ಕೇ ಅವನು ಮದುವೆಯಾಗಿಲ್ಲ.

★★★

ಗೆಳೆಯ: ಲೋ ಗುಂಡ ನಿನ್ನ ಫ್ರೆಂಡ್ ಗಿರೀಶ ತುಂಬಾ ಬುದ್ಧಿವಂತ. ಆದರೂ ಯಾಕೆ ಎಸ್.ಎಸ್.ಎಲ್.ಸಿ.ಯಲ್ಲಿ ಫೇಲಾಗಿದಾನೆ?
ಗುಂಡ: ಅವನು ಸಿಕ್ಕಾಪಟ್ಟೆ ಕನ್ನಡಾಭಿಮಾನಿ.
ಗೆಳೆಯ: ಅವನು ಫೇಲಾಗುವುದಕ್ಕೂ ಅದಕ್ಕೂ ಏನು ಸಂಬಂಧ?
ಗುಂಡ: ಅವನು ಇಂಗ್ಲಿಷ್ ಪೇಪರ್‌ಗೂ ಕನ್ನಡದಲ್ಲೇ ಉತ್ತರಿಸಿದ್ದ.

**(ಸಂಗ್ರಹ) ಎಸ್.ಕೆ.ಮಂಜುನಾಥ್**